ಭಾನುವಾರ, ಫೆಬ್ರುವರಿ 19, 2017 | ಮಂಗಳೂರು | ₹ 5.00 | ಪುಟ 24 + 2 | ಸಂಪುಟ 20 | ಸಂಚಿಕೆ 50

goo.gl/S62nF1 /prajavani.net @prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಿನ್ನಮತ ಮರೆತು ಒಂದಾದ ಯಡಿಯೂರಪ್ಪ– ಈಶ್ವರಪ್ಪ 4

ಮುಕ್ತಛಂದ

ನೀರಿನಡಿ 8ನೇ ಖಂಡ; ಜೀಲ್ಯಾಂಡಿಯಾ 8

ಅಭ್ಯಾಸ ಪಂದ್ಯದಲ್ಲಿ 85 ರನ್ ಗಳಿಸಿರುವ ಶ್ರೇಯಸ್ ಅಯ್ಯರ್ 12

# ಸಹ್ಯಾದ್ರಿ: 'ಕೋಡ್ ಕ್ವೆಸ್ಟ್' ಸ್ಪರ್ಧೆಗೆ ಚಾಲನೆ

ಪ್ರಜಾವಾಣಿ ವಾರ್ತೆ

**ಮಂಗಳೂರು:** ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಸ್ಟಾರ್ಟ್ ಅಪ್ ಆರಂಭಿಸುವವರಿಗೆ ಡಿಟಿಲ್ಯಾಬ್ಸ್ ಹಾಗೂ ಹೋಸ್ಟ್ ಜೈರೊ ವತಿಯಿಂದ ಯುನಿಕೋರ್ಟ್ ಪ್ರಸ್ತುತಪಡಿಸುವ ವಿವಿಧ ಬಗೆಯ ಸ್ಪರ್ಧೆಗಳನ್ನು ಒಳಗೊಂಡ 'ಕೋಡ್‌ಕ್ವೆಸ್ಟ್ 2ಕೆ17' ಸ್ಪರ್ಧೆ ಶನಿವಾರ ಅಡ್ಯಾರ್‌ನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಿತು.

ಯುನಿಕೋರ್ಟ್‌ನ ಸಹ ಸ್ಥಾಪಕ ಪ್ರಶಾಂತ್ ಶೆಣೈ ಅವರು 'ಕೋಡ್‌ಕ್ವೆಸ್ಟ್ 2ಕೆ17' ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಡಾ. ಯು. ಎಂ. ಭೂಷಿ ಅವರು ಮಾತನಾಡಿ ಕಾರ್ಯಕ್ರಮಕ್ಕೆ ಶುಭಹಾರೈಸಿದರು. ಮಂಗಳೂರಿನಲ್ಲಿ ನಡೆಯುವ ಅತೀ ದೊಡ್ಡ ಸಾಫ್ಟ್‌ವೇರ್ ಸ್ಪರ್ಧೆಯಾಗಿದ್ದು, ಶನಿವಾರ ಬೆಳಿಗ್ಗೆ 9 ಗಂಟೆಗೆ ಆರಂಭವಾಗಿ 36 ಗಂಟೆಗಳ ಕಾಲ, 2 ದಿವಸ ಹಾಗೂ ಒಂದು ರಾತ್ರಿ ನಡೆಯಲಿದೆ. ವಿಜೇತ ಸ್ಪರ್ಧಿಗಳಿಗೆ ₹1 ಲಕ್ಷ ಬಹುಮಾನ ಗೆಲ್ಲುವ ಅವಕಾಶವಿದೆ.

ವಿವಿಧ ಉದ್ಯಮಗಳಿಗೆ ಕೆಲಸ ಮಾಡುವವರನ್ನು ಭೇಟಿ ಮಾಡಲು ಕೋಡ್‌ಕ್ವೆಸ್ಟ್ ಅವಕಾಶ ಕಲ್ಪಿಸಿದ್ದು, ನೂತನ ತಂತ್ರಜ್ಞಾನದಲ್ಲಿ ಹೊಸದಾಗಿ ಕಂಪೆನಿ ಆರಂಭಿಸುವವರಿಗೆ ಸೂಕ್ತ ಸಲಹೆ ಪಡೆಯಲು ಅನುಕೂಲವಾಗಲಿದೆ. ಮಂಗಳೂರು ಸುತ್ತಮುತ್ತಲಿನ ಐಟಿ ಕಂಪೆನಿಗಳು ಪಾಲ್ಗೊಂಡಿದ್ದು, ಇನ್ನಷ್ಟು ಹುರುಪು ನೀಡಿದಂತಾಗಿದೆ.



ಅಡ್ಯಾರ್‌ನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ನಡೆದ 'ಕೋಡ್‌ಕ್ವೆಸ್ಟ್ 2ಕೆ17' ಕಾರ್ಯಾಗಾರದಲ್ಲಿ ಯುನಿಕೋರ್ಟ್‌ನ ಸಹ ಸ್ಥಾಪಕ ಪ್ರಶಾಂತ್ ಶೆಣೈ ಮಾತನಾಡಿದರು.

ಕಾರ್ಯಾಗಾರದಲ್ಲಿ ಯುನಿಕೋರ್ಟ್‌ನ ಸಹ ಸ್ಥಾಪಕ ಪ್ರಶಾಂತ್ ಶೆಣೈ ಅವರು ವಿದ್ಯಾರ್ಥಿಗಳಿಗೆ ಹ್ಯಾಕಥಾನ್, ಕೋಡಿಂಗ್ ಈವೆಂಟ್ ಹಾಗೂ ತಾಂತ್ರಿಕ ವಿಷಯಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಡಿಟಿಲ್ಯಾಬ್ಸ್‌ನ ನಿರ್ದೇಶಕ ಜಾನ್ಸನ್ ಟೆನ್ನಿಸ್, ಕೋಡರ್ ಅಂಡ್ ಡೆವಲಪರ್ಸ್ ಆಫ್ ಸೆವೆನ್ ಟೆಕ್ನಾಲಜೀಸ್‌ನ ರಾಜೇಶ್ ಪ್ರಭು, ಹೋಸ್ಟ್ ಜೈರೊ ಸ್ಥಾಪಕ ನರೇಶ್ ಭಟ್ ಹಾಗೂ ಉಪನ್ಯಾಸಕ ರಕ್ಷಿತ್ ಶೆಟ್ಟಿ ಮತ್ತಿತರರು ಇದ್ದರು.

ಭಾನುವಾರ, 19 ಫೆಬ್ರವರಿ 2017 | ಪುಟಗಳು: 14+4+6 | ಬೆಲೆ: ₹ 5.00
www.vijaykarnataka.com
ಸಂಪುಟ: 16 | ಸಂಚಿಕೆ: 205
VK ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ |



ಉತ್ತರ ಪ್ರದೇಶ ದತ್ತು ಪುತ್ರನ ಆರಿಸುವುದಿಲ್ಲ, ಸ್ವಂತ ಮಗಳನ್ನೇ ಗೆಲ್ಲಿಸುತ್ತದೆ: ಮಾಯಾವತಿ
ಹೊಸ ರಾಷ್ಟ್ರೀಯ ಮಾರಾಟ ತೆರಿಗೆ ಪದ್ಧತಿ ಜಾರಿಯಿಂದ ರಾಜ್ಯಗಳಿಗೆ ಆಗಬಹುದಾದ ಆದಾಯ ಖೋತಾಗೆ ಪರಿಹಾರ ಒದಗಿಸುವ ಕಾನೂನಿಗೆ ಜಿಎಸ್‌ಟಿ ಮಂಡಳಿ ಒಪ್ಪಿಗೆ
ವಿರಾಟ್ ಕೊಹ್ಲಿ ಬದುಕನ್ನೇ ಬದಲಿಸಿತಂ
ಆಟೊಬಯಾಗ್ರಫಿ ಆಫ್ ಯೋಗಿ ಪುಸ್ತ

# ಸಹ್ಯಾದ್ರಿ ಕಾಲೇಜಿನಲ್ಲಿ ಕೋಡ್‌ಕ್ವೆಸ್ಟ್ 2ಕೆ17ಗೆ ಚಾಲನೆ




**ಮಂಗಳೂರು**: ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಸ್ಟಾರ್ಟ್ ಅಪ್ ಆರಂಭಿಸುವವರಿಗೆ ವಿವಿಧ ಬಗೆಯ ಸ್ಪರ್ಧೆಗಳನ್ನು ಒಳಗೊಂಡ 'ಕೋಡ್‌ಕ್ವೆಸ್ಟ್ 2ಕೆ17'-ಕ್ವೆಸ್ಟ್ ಫಾರ್ ದಿ ಬೆಸ್ಟ್ ಎಂಜಿನಿಯರಿಂಗ್ ಮೈಂಡ್ಸ್ ಸ್ಪರ್ಧೆ ನಗರದ ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ಶನಿವಾರ ಉದ್ಘಾಟನೆಗೊಂಡಿತು.

ಯುನಿಕೋರ್ಟ್‌ನ ಸಿಟಿಒ ಸಹ ಸಂಸ್ಥಾಪಕ ಪ್ರಶಾಂತ್ ಶೆಣೈ ಮಾತನಾಡಿ, ಈ ಸ್ಪರ್ಧೆಯು ವಿದ್ಯಾರ್ಥಿಗಳಿಗೆ ಉತ್ತಮ ವೇದಿಕೆ ಒದಗಿಸಲಿದೆ. ತಾಂತ್ರಿಕ ಜ್ಞಾನದೊಂದಿಗೆ ಸ್ಪರ್ಧಾತ್ಮಕ ಯುಗದೊಂದಿಗೆ ಹೆಜ್ಜೆ ಹಾಕಲು ಇಂತಹ ಸ್ಪರ್ಧೆಗಳು ಸಹಕಾರಿ ಎಂದರು.

ಕಾಲೇಜು ಪ್ರಿನ್ಸಿಪಾಲ್ ಡಾ.ಯು.ಎಂ. ಭೂಷಿ ಮಾತನಾಡಿ, ವಿದ್ಯಾರ್ಥಿಗಳ ಸುಪ್ತ ತಾಂತ್ರಿಕ ಕೌಶಲವನ್ನು ಹೊರತೆಗೆಯಲು ಕೋಡ್ ಕ್ವೆಸ್ಟ್ ಸಹಕಾರಿ. ವಿದ್ಯಾರ್ಥಿಗಳು ತಮಗೆ ಸಿಗುವ ಅವಕಾಶಗಳನ್ನು ಸದ್ವಿನಿಯೋಗಪಡಿಸಿಕೊಂಡರೆ ಭವಿಷ್ಯದಲ್ಲಿ ಉತ್ತುಂಗಕ್ಕೇರಲು ಸಾಧ್ಯ ಎಂದರು.

ಫೆ. 15ರಂದು 104 ಉಪಗ್ರಹಗಳನ್ನು ಉಡಾಯಿಸಿದ ಇಸ್ರೋ ತಂಡದಲ್ಲಿ ಸಹ್ಯಾದ್ರಿ ಕಾಲೇಜಿನ ಸಿಎಸ್ ವಿಭಾಗದ ಹಳೆ ವಿದ್ಯಾರ್ಥಿ ನವೀನ್ ಟಿ. ಪಿ. ಇದ್ದರು ಎಂದು ಆಯೋಜಕರು ಕಾರ್ಯಕ್ರಮದಲ್ಲಿ ಸಂತಸ ವ್ಯಕ್ತಪಡಿಸಿದರು. ಡಿಟಿ ಲ್ಯಾಬ್ಸ್‌ನ ನಿರ್ದೇಶಕ ಜಾನ್ಸನ್ ಟೆಲ್ಲೀಸ್, ಸೆವೆನ್ ಟೆಕ್ನಾಲಜೀಸ್‌ನ ಡೆವಲಪರ್ ರಾಜೇಶ್ ಪ್ರಭು, ಹೋಸ್ಟ್ ಜೈರೊದ ಸ್ಥಾಪಕ ನರೇಶ್ ಭಟ್, ಮೆಕ್ಯಾನಿಕಲ್ ಎಂಜಿನಿಯರಿಂಗ್‌ನ ಸಹಾಯಕ ಪ್ರಾಧ್ಯಾಪಕ ರಕ್ಷಿತ್ ಶೆಟ್ಟಿ ಉಪಸ್ಥಿತರಿದ್ದರು.

ಮಂಗಳೂರಿನಲ್ಲೇ ಅತೀ ದೊಡ್ಡ ಸಾಫ್ಟ್‌ವೇರ್ ಸ್ಪರ್ಧೆ ಇದಾಗಿದ್ದು, ಶನಿವಾರ ಬೆಳಗ್ಗೆ 9 ಗಂಟೆಗೆ ಆರಂಭಗೊಂಡು 36 ಗಂಟೆಗಳ ಕಾಲ ಸ್ಪರ್ಧೆ ನಡೆಯಲಿದೆ. ವಿಜೇತರಿಗೆ 1 ಲಕ್ಷ ರೂ. ಬಹುಮಾನವಿರುತ್ತದೆ. ಕರ್ನಾಟಕದಿಂದ 150 ಮಂದಿ ವಿದ್ಯಾರ್ಥಿಗಳು ಹ್ಯಾಕಥಾನ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

~ಮುಂಜಾನೆ ಮಾತು~
ದೊಡ್ಡ ಸಂಗತಿಗಳನ್ನು ಮಾಡಲು ಸಾಧ್ಯವಾಗದಿದ್ದರೆ ಬೇಡ. ಸಣ್ಣಪುಟ್ಟ ಕೆಲಸಗಳನ್ನೇ ಶ್ರದ್ಧೆ ಪ್ರಾಮಾಣಿಕತೆಗಳಿಂದ ಮಾಡಿದರೆ ಅದೇ ಮಹತ್ಕಾರ್ಯ ಎನಿಸಿಕೊಳ್ಳುತ್ತದೆ.

ವಿಜಯವಾಣಿ
ನಂ. 1 ಕನ್ನಡ ದಿನಪತ್ರಿಕೆ
ಕನ್ನಡಿಗರ ಧ್ವನಿ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ | VIJAYAVANI • MANGALURU | ಮಂಗಳೂರು • ಸಂಪುಟ 5 • ಸಂಚಿಕೆ 321
vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682 | 19 ಫೆಬ್ರವರಿ 2017 | ಭಾನುವಾರ | 19 FEBR

Sahyadri College of Engineering & Management, Adyar, Mangalore - CENTRAL LIBRARY

# ಮಂಗಳೂರಿನಲ್ಲಿ ನಿರಂತರ 36 ಗಂಟೆಗಳ ಹ್ಯಾಕಥಾನ್

**ವಿಜಯವಾಣಿ ಸುದ್ದಿಜಾಲ** ಮಂಗಳೂರು

ರಾಜ್ಯದ 150 ವಿದ್ಯಾರ್ಥಿಗಳು ನಿರಂತರ 36 ಗಂಟೆ ನಿದ್ದೆ ಬಿಟ್ಟು ಕಂಪ್ಯೂಟರ್ ಪ್ರೋಗ್ರಾಮ್‌ಗಳನ್ನು ಹ್ಯಾಕ್ ಮಾಡುವ ಸ್ಪರ್ಧೆ 'ಹ್ಯಾಕಥಾನ್'. ಈ ಹಗಲು ರಾತ್ರಿ ಸ್ಪರ್ಧೆಯಲ್ಲಿ ಗೆದ್ದವರಿಗೆ ಲಕ್ಷ ರೂ. ಬಹುಮಾನ!

**» ಸಹ್ಯಾದ್ರಿ ಕಾಲೇಜಿನಲ್ಲಿ ಕೋಡ್ ಕ್ವೆಸ್ಟ್ ಸ್ಪರ್ಧೆ ಆರಂಭ**

ಮಂಗಳೂರಿನ ಅತಿ ದೊಡ್ಡ ಸಾಫ್ಟ್‌ವೇರ್ ಸ್ಪರ್ಧೆಗೆ (ಕೋಡ್ ಕ್ವೆಸ್ಟ್) ಅಡ್ಯಾರು ಸಹ್ಯಾದ್ರಿ ಕಾಲೇಜಿನಲ್ಲಿ ಶನಿವಾರ ವಿಧ್ಯುಕ್ತ ಚಾಲನೆ ನೀಡಲಾಯಿತು.

ಸ್ಪರ್ಧಿಸುವ ತಂಡಗಳಿಗೆ ಕಾಲೇಜಿನ ವರಾಂಡದಲ್ಲಿ ಪ್ರತ್ಯೇಕ ಜಾಗ ಮೀಸಲಿರಿಸಲಾಗಿದ್ದು, ಪ್ರತಿ ತಂಡಕ್ಕೆ ಪ್ರತ್ಯೇಕ ಕಂಪ್ಯೂಟರ್ ಲ್ಯಾಪ್‌ಟಾಪ್ ನೀಡಲಾಗಿದೆ. ಆಯೋಜಕರು ನೀಡುವ ಕಠಿಣ ಕಂಪ್ಯೂಟರ್ ಪ್ರೋಗ್ರಾಂಗಳನ್ನು 36 ಗಂಟೆಗಳ ಒಳಗೆ ತಂಡ ಹ್ಯಾಕ್ ಮಾಡಬೇಕು (ಎರಡು ಹಗಲು ಒಂದು ರಾತ್ರಿ). ಸ್ಪರ್ಧಿಗಳಿಗೆ ನಿದ್ದೆ ಮಾಡಲು ಸಮಯವಿಲ್ಲ. ಸಣ್ಣ ಅವಧಿಯ ವಿಶ್ರಾಂತಿ ಮಾತ್ರ ಲಭ್ಯ. ಪ್ರಸ್ತುತ ದಿನಗಳಲ್ಲಿ ಪ್ರತಿಭಾವಂತ ಹ್ಯಾಕರ್‌ಗಳಿಗೆ, ಯಾರಿಗೂ ಪ್ರವೇಶ ಮಾಡಲಾಗದ ಪ್ರೋಗ್ರಾಂ ನಿರ್ಮಿಸುವವರಿಗೆ ಐಟಿ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ. ಸ್ಪರ್ಧೆ ಉದ್ಘಾಟನೆ ಸಂದರ್ಭ ಕಾಲೇಜು ಪ್ರಾಂಶುಪಾಲ ಡಾ.ಯು.ಎಂ.ಭೂಷಿ, ಯೂನಿಕೋರ್ಟ್ ಸಂಸ್ಥೆ ಸಹ ಸಂಸ್ಥಾಪಕ ಮತ್ತು ಮುಖ್ಯ ತಾಂತ್ರಿಕ ಅಧಿಕಾರಿ ಪ್ರಶಾಂತ್ ಶೆಣೈ, ಡಿಟಿ ಲ್ಯಾಬ್ಸ್ ನಿರ್ದೇಶಕ ಜಾನ್‌ಟೆಲಿಸ್, ಐಟಿ ತಂತ್ರಜ್ಞಾನಿಗಳಾದ ರಾಜೇಶ್‌ಪ್ರಭು, ನರೇಶ್ ಭಟ್, ಮೆಕಾನಿಕಲ್ ಇಂಜಿನಿಯರಿಂಗ್‌ನ ಅಸಿಸ್ಟೆಂಟ್ ಪ್ರೊಫೆಸರ್ ರಕ್ಷಿತ್ ಶೆಟ್ಟಿ ಉಪಸ್ಥಿತರಿದ್ದರು.

ವಿಜಯವಾಣಿ ಚಿತ್ರ




ಅಡ್ಯಾರು ಸಹ್ಯಾದ್ರಿ ಕಾಲೇಜಿನಲ್ಲಿ ನಡೆದ 'ಕೋಡ್ ಕ್ವೆಸ್ಟ್' ಸ್ಪರ್ಧೆಯಲ್ಲಿ ಕಾಲೇಜು ಪ್ರಾಂಶುಪಾಲ ಡಾ.ಯು.ಎಂ.ಭೂಷಿ ಮಾತನಾಡಿದರು.

## ಮಂಗಳೂರಿನಲ್ಲಿ 100ಕ್ಕೂ ಹೆಚ್ಚು ಐಟಿ ಕಂಪನಿಗಳು

ಮಂಗಳೂರಿನಲ್ಲಿ 100ಕ್ಕೂ ಹೆಚ್ಚು ಐಟಿ ಕಂಪನಿಗಳು, 8 ಸಾವಿರಕ್ಕೂ ಮಿಕ್ಕಿ ಐಟಿ ಡೆವಲಪರ್ಸ್ ಮತ್ತು ಟೆಸ್ಟರ್ಸ್‌ಗಳಿದ್ದಾರೆ. ಮಂಗಳೂರಿನ ಐಟಿ ಸಮುದಾಯ ವೃದ್ಧಿಗೆ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಟೆಕ್ ಗುಂಪುಗಳನ್ನು ನಿರ್ಮಾಣ ಮಾಡಬೇಕು. ತಾಂತ್ರಿಕ ಕಾರ್ಯಾಗಾರಗಳನ್ನು ಆಯೋಜಿಸಬೇಕು. ತಮಗಿರುವ ಐಟಿ ಜ್ಞಾನವನ್ನು ಇತರರಿಗೂ ಹಂಚಬೇಕು ಎಂದು ಯೂನಿಕೋರ್ಟ್ ಸಂಸ್ಥೆ ಸಹ ಸಂಸ್ಥಾಪಕ, ಮುಖ್ಯ ತಾಂತ್ರಿಕ ಅಧಿಕಾರಿ ಪ್ರಶಾಂತ್ ಶೆಣೈ ಹೇಳಿದರು.

www.varthabharati.in
ಜನದನಿಯ ಸಾರಥಿ
www.vbepaper.com
ವಾರ್ತಾ ಭಾರತಿ
ಸತ್ಯ ಎಲ್ಲೆಡೆಗೆ
ಮಂಗಳೂರು ಮತ್ತು ಬೆಂಗಳೂರಿನಿಂದ ಪ್ರಕಟಿತ
19 ಫೆಬ್ರವರಿ 2017
ರವಿವಾರ
VARTHABHARATHI KANNADA DAILY
REGD.NO: MNG/958/2016-18 RNI NO. KAR KAN/2003/11378 • ಸಂಪುಟ 14 • ಸಂಚಿಕೆ 171 • ಮಂಗಳೂರು • ಪುಟ 12+4 • ಬೆಲೆ ರೂ. 5.00

Sahyadri College of Engineering & Management
CENTRAL LIBRARY
Adyar, Mangaluru-7

FURNI
WHERE
UDUPI: Himalaya Enc
MANGALORE: Nanthoor - M
SHIMOGA: Scout Bhavan

# ಸಹ್ಯಾದ್ರಿ ಕಾಲೇಜಿನಲ್ಲಿ 'ಕೋಡ್ ಕ್ವೆಸ್ಟ್-2017'ಕ್ಕೆ ಚಾಲನೆ




ಮಂಗಳೂರು, ಫೆ.18: ವಿದ್ಯಾರ್ಥಿಗಳು ವೃತ್ತಿಪರರು ಹಾಗೂ ಸ್ಟಾರ್ಟ್ ಅಪ್ ಆರಂಭಿಸುವವರಿಗೆ ವಿವಿಧ ಸ್ಪರ್ಧೆಗಳನ್ನು ಒಳಗೊಂಡ 'ಕೋಡ್ ಕ್ವೆಸ್ಟ್' ಸ್ಪರ್ಧೆಗೆ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೂನಿಕೋರ್ಟ್‌ನ ಸಹ ಸಂಸ್ಥಾಪಕ ಪ್ರಶಾಂತ್ ಶೆಣೈ ಶನಿವಾರ ಚಾಲನೆ ನೀಡಿದರು.

ಈ ಸಂದರ್ಭ ಮಾತನಾಡಿದ ಅವರು, ಡಿಟಿ ಲ್ಯಾಬ್ಸ್ ಹಾಗೂ ಹೋಸ್ಟ್ ಜೈರೊ ಸಹಯೋಗದಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ ಯೂನಿಕೋರ್ಟ್ ಟೈಟಲ್ ಸ್ಪೊನ್ಸರ್ಸ್, ರೇಡಿಯೊ ಮಿರ್ಚಿ ಮೀಡಿಯ ಪಾರ್ಟ್ನರ್, ಮೊಝಿಲ್ಲ ಮೆಂಟರಿಂಗ್ ಪಾರ್ಟ್ನರ್ ಆಗಿ ಕೈ ಜೋಡಿಸಿದ್ದು, ಆ ಮೂಲಕ ಜನರಿಗೆ ಉದ್ಯೋಗ ಒದಗಿಸಲಿದೆ ಎಂದರು.

ವಿವಿಧ ಉದ್ಯಮಗಳಲ್ಲಿ ಕೆಲಸ ಮಾಡುವವರನ್ನು ಭೇಟಿ ಮಾಡಲು ಕೋಡ್ ಕ್ವೆಸ್ಟ್ ಅವಕಾಶ ಕಲ್ಪಿಸಿದೆ. ನೂತನ ತಂತ್ರಜ್ಞಾನದಲ್ಲಿ ಹೊಸದಾಗಿ ಕಂಪೆನಿ ಆರಂಭಿಸುವವರಿಗೆ ಸೂಕ್ತ ಸಲಹೆ ಪಡೆಯಲು ಅನುಕೂಲವಾಗಲಿದೆ. ಮಂಗಳೂರು ಸುತ್ತಮುತ್ತಲಿನ ಐಟಿ ಕಂಪೆನಿಗಳು ಕೋಡ್‌ಕ್ವೆಸ್ಟ್‌ನಲ್ಲಿ ಭಾಗವಹಿಸಿದ್ದು, ವಿದ್ಯಾರ್ಥಿಗಳು, ಸ್ಟಾರ್ಟ್ ಅಪ್, ಕಾರ್ಪೊರೇಟ್ ಹಾಗೂ ಹವ್ಯಾಸಿಗಾರರು ತಮ್ಮ ಕೌಶಲ ಪ್ರದರ್ಶಿಸಲು ಅವಕಾಶವಿದೆ ಎಂದರು.

ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಡಾ. ಯು.ಎಂ. ಭುಶಿ, ಡಿಟಿ ಲ್ಯಾಬ್‌ನ ನಿರ್ದೇಶಕ ಜಾನ್‌ಸನ್ ಟೆಲ್ಲಿಸ್, ಸೆವೆನ್ ಟೆಕ್ನಾಲಜೆಸ್‌ನ ಕೋಡರ್ ಆ್ಯಂಡ್ ಡೆವಲಪರ್ ರಾಜೇಶ್ ಪ್ರಭು, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ರಕ್ಷಿತ್ ಶೆಟ್ಟಿ ಉಪಸ್ಥಿತರಿದ್ದರು.

ಸಂಧಿಲಿನ್
ಆಯುರ್ವೇದ ನೋವು ನಿವಾರಕ ಎಣ್ಣೆ
ಗಂಟುನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ
SDM ISO / GMP CERTIFIED
ತಯಾರಕರು
sdmaph@gmail.com
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ

ಸಾಪ್ತಾಹಿಕ
ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

CENTRAL LIBRARY
Sahyadri College of Engineering & Management
Adyar, Mangalore

ನೂತನ ವಿನ್ಯಾಸಗಳ ... ಒಡವೆಗಳು
ಆಶಾ ಜ್ಯುವೆಲ್ಲರ್ಸ್
ಕನಕದಾಸ ರಸ್ತೆ, ಉಡುಪಿ 57

Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ಫೆಬ್ರವರಿ 19, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 16+8

# ಸಹ್ಯಾದ್ರಿ ಕಾಲೇಜಿನಲ್ಲಿ ಕೋಡ್‌ಕ್ವೆಸ್ಟ್ 2ಕೆ17ಗೆ ಚಾಲನೆ




ಮಂಗಳೂರು: ಪ್ರಶಾಂತ್ ಶೆಣೈ ಅವರು ಮಾತನಾಡಿದರು.

ಮಂಗಳೂರು, ಫೆ. 18: ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಸ್ಟಾರ್ಟ್ ಅಪ್ ಆರಂಭಿಸುವವರಿಗೆ ವಿವಿಧ ಬಗೆಯ ಸ್ಪರ್ಧೆಗಳನ್ನು ಒಳಗೊಂಡ 'ಕೋಡ್‌ಕ್ವೆಸ್ಟ್ 2ಕೆ17'-ಕ್ವೆಸ್ಟ್ ಫಾರ್ ದಿ ಬೆಸ್ಟ್ ಎಂಜಿನಿಯರಿಂಗ್ ಮೈಂಡ್ಸ್ ಸ್ಪರ್ಧೆ ನಗರದ ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ಶನಿವಾರ ಉದ್ಘಾಟನೆ ಗೊಂಡಿತು.

ಮುಖ್ಯ ಅತಿಥಿ, ಯುನಿಕೋರ್ಟ್‌ನ ಸಿಟಿಒ ಸಹ ಸಂಸ್ಥಾಪಕ ಪ್ರಶಾಂತ್ ಶೆಣೈ ಮಾತನಾಡಿ, ಈ ಸ್ಪರ್ಧೆಯು ವಿದ್ಯಾರ್ಥಿಗಳಿಗೆ ಉತ್ತಮ ವೇದಿಕೆ ಒದಗಿಸಲಿದೆ. ತಾಂತ್ರಿಕ ಜ್ಞಾನದೊಂದಿಗೆ ಸ್ಪರ್ಧಾತ್ಮಕ ಯುಗದೊಂದಿಗೆ ಹೆಜ್ಜೆ ಹಾಕಲು ಇಂತಹ ಸ್ಪರ್ಧೆಗಳು ಸಹಕಾರಿ ಎಂದರು.

ಕಾಲೇಜು ಪ್ರಾಂಶುಪಾಲ ಡಾ। ಯು. ಎಂ. ಭೂಷಿ ಮಾತನಾಡಿ, ವಿದ್ಯಾರ್ಥಿಗಳ ಸುಪ್ತ ತಾಂತ್ರಿಕ ಕೌಶಲವನ್ನು ಹೊರತೆಗೆಯಲು ಕೋಡ್‌ಕ್ವೆಸ್ಟ್ ಸಹಕಾರಿ. ವಿದ್ಯಾರ್ಥಿಗಳು ತಮಗೆ ಸಿಗುವ ಅವಕಾಶಗಳನ್ನು ಸದ್ವಿನಿಯೋಗಪಡಿಸಿಕೊಂಡರೆ ಭವಿಷ್ಯದಲ್ಲಿ ಉತ್ತುಂಗಕ್ಕೇರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಫೆ. 15ರಂದು 104 ಉಪಗ್ರಹಗಳನ್ನು ಉಡಾಯಿಸಿದ ಇಸ್ರೋ ತಂಡದಲ್ಲಿ ಸಹ್ಯಾದ್ರಿ ಕಾಲೇಜಿನ ಸಿಎಸ್ ವಿಭಾಗದ ಹಳೆ ವಿದ್ಯಾರ್ಥಿ ನವೀನ್ ಟಿ.ಪಿ. ಇದ್ದರು ಎಂದು ಆಯೋಜಕರು ಕಾರ್ಯಕ್ರಮದಲ್ಲಿ ಸಂತಸ ವ್ಯಕ್ತಪಡಿಸಿದರು.

ಡಿಟಿ ಲ್ಯಾಬ್ಸ್‌ನ ನಿರ್ದೇಶಕ ಜಾನ್ಸನ್ ಟೆಲ್ಲೀಸ್, ಸೆವೆನ್ ಟೆಕ್ನಾಲಜೀಸ್‌ನ ಡೆವಲಪರ್ ರಾಜೇಶ್ ಪ್ರಭು, ಹೋಸ್ಟೆ ಜೈರೊದ ಸ್ಥಾಪಕ ನರೇಶ್ ಭಟ್, ಮೆಕ್ಯಾನಿಕಲ್ ಎಂಜಿನಿಯರಿಂಗ್‌ನ ಸಹಾಯಕ ಪ್ರಾಧ್ಯಾಪಕ ರಕ್ಷಿತ್ ಶೆಟ್ಟಿ ಉಪಸ್ಥಿತರಿದ್ದರು.

ಮಂಗಳೂರಿನಲ್ಲೇ ಅತೀ ದೊಡ್ಡ ಸಾಫ್ಟ್‌ವೇರ್ ಸ್ಪರ್ಧೆ ಇದಾಗಿದ್ದು ಶನಿವಾರ ಬೆಳಗ್ಗೆ 9 ಗಂಟೆಗೆ ಆರಂಭವಾಗಿದ್ದು 36 ಗಂಟೆಗಳ ಕಾಲ (2 ದಿನ, 1 ರಾತ್ರಿ) ಸ್ಪರ್ಧೆ ನಡೆಯಲಿದೆ. ವಿಜೇತರಿಗೆ 1 ಲಕ್ಷ ರೂ. ಬಹುಮಾನವಿರುತ್ತದೆ. ಕರ್ನಾಟಕದಿಂದ 150 ಮಂದಿ ವಿದ್ಯಾರ್ಥಿಗಳು ಹ್ಯಾಕಥಾನ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಸ್ಟಾರ್ಟ್ ಅಪ್ ಆರಂಭಿಸುವವರಿಗೆ ಕೋಡ್‌ಕ್ವೆಸ್ಟ್ ಸ್ಪರ್ಧೆಯಲ್ಲಿ ಹ್ಯಾಕಥಾನ್, ಕಾರ್ಯಾಗಾರ, ಕೋಡಿಂಗ್ ಈವೆಂಟ್ಸ್, ತಾಂತ್ರಿಕ ಚರ್ಚೆಗಳು ನಡೆದವು. ಡಿಟಿಲ್ಯಾಬ್ಸ್ ಹಾಗೂ ಹೋಸ್ಟೆ ಜೈರೊ ವತಿಯಿಂದ ಯುನಿಕೋರ್ಟ್ ಪ್ರಸ್ತುತಿಯೊಂದಿಗೆ ಸ್ಪರ್ಧೆ ಆಯೋಜನೆಗೊಂಡಿದೆ.

THE NEW
# INDIAN EXPRESS
MANGALURU • MONDAY • FEBRUARY 20, 2017 • ₹5.00 • PAGES 32 • CITY EDITION

Sahyadri College of Engineering & Management
CENTRAL LIBRARY
Adyar, Mangalore



## ONLINE PF WITHDRAWAL WITHIN HOURS BY MAY

**To put an end to tedious paperwork, Employees Provident Fund Organisation has come up with novel facility**

**RESPONSE, QUICK AND EASY**

EPFO will connect all 123 field offices with central server to facilitate online submission of all types of applications and claims like EPF withdrawal and pension settlement by May. As of now, around 50 field offices have already been connected with the central server.

**LINK ACCOUNTS, FASTER SETTLEMENT...**

- EPF account, pension account and bank account will be linked with the Aadhar number of the online subscribers.
- It has plans to settle claims within hours of filing application, while there are efforts to reduce EPF settlement time to just three hours.

CHENNAI • MADURAI • VIJAYAWADA • BENGALURU • KOCHI • HYDERABAD • VISAKHAPATNAM • COIMBATORE • KOZHIKODE • THIRUVANANTHAPURAM • BELAGAVI • BHUBANESWAR • SHIVAMOGGA • TIRUCHY • TIRUPATI • MANGALURU •

# Motorsport engineers get ready to race on the track

**SAE BAJA 2017, venue for budding motorheads still in college, to compete with their own All-Terrain vehicles**




The team members of 'Sahayadri Motorsports' of Sahayadri College of Engineering and Management

SAE BAJA 2017 is an event organised by SAE India for the undergraduate engineering students. In this event the students are required to design, analyse and fabricate an All-Terrain vehicle. There are various tests such as acceleration, hill climb, manoeuvrability and endurance in this event. The vehicle built must endure on the track without much breakdowns.The vehicle must be designed based on the rulebook provided by the event organisers and we need to follow right engineering practises while doing so.

SAE BAJA 2017 is the Decade Edition of the series and will be held at Pithampur, Indore. The event starts on February 15 and finishes on February 21. Participating in such event provides much needed exposure to students to help them improve their skills in the field.

'Sahyadri Motorsports' is the team representing Sahyadri College of Engineering and Management at this event. The team is participating for the second time in this event. The team comprises of the following members: Bhavik Das [Team Captain], Madhukeshwara B [Vice Captain], Chetan R Naik [Team Manager], Preetham Shetty, Anubhav R Shetty, Jostal Rayan D'Souza, DeveshDubey, Sharath S, Sandesh Kumar, Muhammad Ashfan S, Mohammed Mansoor K, Sagar Purushotama Kulal, Sudeep K, Varshith K B, Vishwajith M, Chethan H Gadad, Sayyed Mohammad Zaved, Sandeep Suvarna, Nagabhusan S P, Pranav Padavu, Nikethan Nachappa, Chandan H Y, Chaitra, BolarNavyashree, Sreerag K

The Sahyadri Motorsports team guided by Mr. Prasad Chandran, Asst. Professor from Mechanical Department.

**The history of ATVs**
All-Terrain vehicles were first made available in the early 1960s

3..2..1 go




**The rules**
Students will have to design, analyse and fabricate their All-Terrain vehicle

~ಮುಂಜಾನೆ ಮಾತು ~
ದೊಡ್ಡ ಸಂಗತಿಗಳನ್ನು ಮಾಡಲು ಸಾಧ್ಯವಾಗದಿದ್ದರೆ ಬೇಡ. ಸಣ್ಣಪುಟ್ಟ ಕೆಲಸಗಳನ್ನೇ ಶ್ರದ್ಧೆ ಪ್ರಾಮಾಣಿಕತೆಗಳಿಂದ ಮಾಡಿದರೆ ಅದೇ ಮಹತ್ಕಾರ್ಯ ಎನಿಸಿಕೊಳ್ಳುತ್ತದೆ.

# ವಿಜಯವಾಣಿ

ಕನ್ನಡಿಗರ ಧ್ವನಿ

ನಂ. 1 ಕನ್ನಡ ದಿನಪತ್ರಿಕೆ




CENTRAL LIBRARY

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ | VIJAYAVANI ● MANGALURU | ಮಂಗಳೂರು ● ಸಂಪುಟ 5 ● ಸಂಚಿಕೆ 321

vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682 | 19 ಫೆಬ್ರವರಿ 2017 | ಭಾನುವಾರ | 19 FEBR

**ಪ್ರಧಾನಿ ಮೋದಿ ಕೈಗಾರಿಕಾ ಅಭಿವೃದ್ಧಿಗಾಗಿ ಮೇಕ್ ಇನ್ ಇಂಡಿಯಾ, ಸ್ಟಾರ್ಟಪ್ ಇಂಡಿಯಾದಂಥ ಯೋಜನೆಗಳನ್ನು ಆರಂಭಿಸಿದ್ದಾರೆ. ಇದರಿಂದ ದೇಶದಲ್ಲಿ ಸ್ಟಾರ್ಟಪ್‌ಗಳ ಸಂಖ್ಯೆಯೇನೋ ಏರಿಕೆಯಾಗಿದೆ. ಆದರೆ 2015 ಮತ್ತು 2016ರಲ್ಲಿ ಇದಕ್ಕೆ ಹರಿದು ಬಂದ ಹೂಡಿಕೆ ಪ್ರಮಾಣ ತೀರಾ ಕಡಿಮೆಯೇ. ಇದರ ಅಭಿವೃದ್ಧಿ ದರವೂ ಪ್ರೇರಣಾದಾಯಕ ಎನ್ನುವ ಹಾಗೇನಿಲ್ಲ. ಆದರೆ 2017ರಲ್ಲಿ ಸ್ಟಾರ್ಟ್‌ಅಪ್‌ಗಳಿಗೆ ಪೂರಕ ವಾತಾವರಣ ನಿರ್ಮಾಣವಾಗುವ ನಿರೀಕ್ಷೆಯಿದೆ. 2017ರ ಇಂಡಿಯಾ ಸ್ಟಾರ್ಟ್‌ಅಪ್ ಔಟ್‌ಲುಕ್ ವರದಿಯಂತೆ ಈ ವರ್ಷ ಸ್ಟಾರ್ಟಪ್‌ಗಳಿಗೆ ಹೆಚ್ಚಿನ ಹೂಡಿಕೆ ಹರಿದು ಬರುವ ನಿರೀಕ್ಷೆಯಿದೆ.**

# ಸ್ಟಾರ್ಟಪ್‌ಗಳಿಗೆ ಸಕಾಲ




- ಶೇ.65ರಷ್ಟು ಸ್ಟಾರ್ಟಪ್‌ಗಳಿಗೆ ಈ ವರ್ಷ ಹೆಚ್ಚಿನ ಹೂಡಿಕೆ ಹರಿದು ಬರುವ ನಿರೀಕ್ಷೆಯಿದೆ.
- 5 ತಿಂಗಳಲ್ಲಿ 12.5 ಮಿಲಿಯನ್ ಡಾಲರ್(83 ಕೋಟಿ ರೂಪಾಯಿ) ಹೂಡಿಕೆ ಹರಿದು ಬರಲಿದೆಯೆಂದು ಅಂದಾಜಿಸಲಾಗಿದೆ.
- ನೋಟು ಚಲಾವಣೆ ಸ್ಥಗಿತಗೊಳಿಸಿದ್ದು ಉದ್ಯಮಕ್ಕೆ ಪೂರಕ ಎಂದು ಶೇ.52ರಷ್ಟು ಸಂಸ್ಥೆಗಳು ಅಭಿಪ್ರಾಯಪಟ್ಟಿವೆ.

**ಸ್ಟಾ**ರ್ಟಪ್ ಇಂಡಿಯಾದ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿ ಹೂಡಿಕೆಗಳನ್ನು ಭಾರತದತ್ತ ಸೆಳೆಯಬೇಕೆಂಬ ಪ್ರಯತ್ನವೇನೋ ನಡೆಯಿತು ಆದರೆ ಬಂದ ಹೂಡಿಕೆ ಪ್ರಮಾಣ ಮಾತ್ರ ತೃಪ್ತಿದಾಯಕವಾಗಿಲ್ಲ. ಆದರೆ ಈ ವರ್ಷ ಸ್ಟಾರ್ಟಪ್‌ಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹೂಡಿಕೆ ಹರಿದು ಬರುವ ನಿರೀಕ್ಷೆಯಿದೆ. ಇನ್ನೋವೆನ್ ಕ್ಯಾಪಿಟಲ್ ಸಂಸ್ಥೆ ಬಿಡುಗಡೆಮಾಡಿರುವ ಇಂಡಿಯಾ ಸ್ಟಾರ್ಟಪ್ ಔಟ್‌ಲುಕ್ ರಿಪೋರ್ಟ್ 2017ರಲ್ಲಿ ಸ್ಟಾರ್ಟಪ್‌ಗಳಿಗೆ ಹೆಚ್ಚಿನ ಹೂಡಿಕೆ ಹರಿದು ಬರಲಿದೆ ಎಂದು ಹೇಳಿದೆ. 170 ಸಂಸ್ಥೆಗಳನ್ನಾಧರಿಸಿ ನಡೆಸಿರುವ ಈ ಸಮೀಕ್ಷೆಯಲ್ಲಿ ಶೇ.65ರಷ್ಟು ಸ್ಟಾರ್ಟಪ್‌ಗಳು ಈ ವರ್ಷ ಹೆಚ್ಚಿನ ಹೂಡಿಕೆ ಹರಿದು ಬರುವ ನಿರೀಕ್ಷೆ ಹೊಂದಿರುವುದಾಗಿ ತಿಳಿಸಿವೆ. ಶೇ.18ರಷ್ಟು ಸ್ಟಾರ್ಟಪ್‌ಗಳು ಮಾತ್ರ ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು ಸದ್ಯ ಇರುವ ಪೂರಕ ವಾತಾವರಣ ಸದ್ಯದಲ್ಲೇ ಮಾಯವಾಗಲಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿವೆ.

**ಹೂಡಿಕೆ ಪ್ರಯತ್ನಗಳು ವಿಫಲ:** 2016 ಸ್ಟಾರ್ಟಪ್‌ಗಳಿಗೆ ಕಷ್ಟದ ಸಮಯವಾಗಿತ್ತು. ಹೂಡಿಕೆ ಹೊಂದಿಸಲು ನಡೆಸಿದ ಶ್ರಮ ಫಲ ನೀಡಿರಲಿಲ್ಲ. ಶೇ. 63ರಷ್ಟು ಸ್ಟಾರ್ಟಪ್‌ಗಳಿಗೆ ಮಾತ್ರ ಅಲ್ಪ ಪ್ರಮಾಣದ ಹೂಡಿಕೆ ಹರಿದು ಬಂದಿತ್ತು. ಆದರೆ ಇದೀಗ ಸರ್ಕಾರ ಕೈಗೊಂಡಿರುವ ಹಲವು ಆರ್ಥಿಕ ಸುಧಾರಣಾ ಕ್ರಮಗಳಿಂದ ಹೆಚ್ಚಿನ ಹೂಡಿಕೆ ಹರಿದು ಬರುವ ನಿರೀಕ್ಷೆಯಿದೆ ಎಂದು ಸ್ಟಾರ್ಟಪ್‌ಗಳು ಅಭಿಪ್ರಾಯಪಟ್ಟಿವೆ. ಅಲ್ಲದೆ ಮುಂದಿನ 5 ತಿಂಗಳ ಅವಧಿಯಲ್ಲಿ 83.84 ಕೋಟಿ ರೂಪಾಯಿ ಹೂಡಿಕೆ ಗಳಿಸಿಕೊಳ್ಳುವ ಗುರಿಯನ್ನು ಹೊಂದಿದ್ದು, ಶೇ.90ರಷ್ಟು ಸ್ಟಾರ್ಟಪ್‌ಗಳು ಈ ನಿಟ್ಟಿನಲ್ಲಿ ಪ್ರಯತ್ನ ಆರಂಭಿಸಿವೆ. ಹೂಡಿಕೆದಾರರಿಂದ ಉತ್ತಮ ಪ್ರತಿಕ್ರಿಯೆಯಿದ್ದು, ಮುಂದಿನ ದಿನಗಳಲ್ಲಿ ಇದೇ ಸ್ಥಿತಿ ಮುಂದುವರಿಯುವ ನಿರೀಕ್ಷೆಯಿದೆ ಎಂದು ತಿಳಿಸಿವೆ.

**ಅನಾಣ್ಯೀಕರಣ ಬೆಳವಣಿಗೆಗೆ ಪೂರಕ:** ನವೆಂಬರ್ 8ರಂದು ಪ್ರಧಾನಿ ನರೇಂದ್ರ ಮೋದಿ 500 ಮತ್ತು 1,000 ರೂಪಾಯಿ ನೋಟುಗಳ ಚಲಾವಣೆಯನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿದರು. ಇದು ಜನರ ದಿನನಿತ್ಯದ ವ್ಯವಹಾರದ ಮೇಲೆ ಪ್ರಭಾವ ಬೀರಿತು. ಅದರಲ್ಲೂ ಸಣ್ಣ ಪ್ರಮಾಣದ ವ್ಯಾಪಾರಿಗಳಿಗೆ ಸ್ಟಾರ್ಟಪ್‌ಗಳಿಗೆ ಇದು ಮಾರಕವಾಗಿದ್ದೇನೋ ನಿಜ. ಅವರ ವ್ಯಾಪಾರ ಸಾಕಷ್ಟು ಏರುಪೇರುಗಳನ್ನು ಎದುರಿಸುವಂತಾಗಿತ್ತು. ಆದರೂ ಶೇ.52ರಷ್ಟು ಸ್ಟಾರ್ಟಪ್‌ಗಳು ದೀರ್ಘಾವಧಿಯ ಅಭಿವೃದ್ಧಿಗೆ ಪೂರಕ ಕ್ರಮವೆಂದು ಅಭಿಪ್ರಾಯಪಟ್ಟಿವೆ. ಆದರೆ ಶೇ. 22 ಜನರು ಮಾತ್ರ ಸರ್ಕಾರದ ಕ್ರಮದಿಂದ ಯಾವುದೇ ರೀತಿಯ ಅನುಕೂಲಗಳಾಗುವುದಿಲ್ಲ ಎಂದು ತಿಳಿಸಿದ್ದಾರೆ.

**ಮಹಿಳಾ ಅಭಿವೃದ್ಧಿಗೆ ಬೆಂಬಲ:** ಮಹಿಳೆಯರಿಗೆ ಪುರುಷರಿಗೆ ಸರಿಸಮಾನವಾದ ಸ್ಥಾನಮಾನ ನೀಡಲಾಗುತ್ತಿಲ್ಲ ಎಂಬ ಆರೋಪವಿದೆ. ಒಂದೇ ಕೆಲಸ ನಿರ್ವಹಿಸುವ ಪುರುಷರು ಮತ್ತು ಮಹಿಳೆಯರ ವೇತನದಲ್ಲೂ ಭಾರಿ ತಾರತಮ್ಯವಿರುವುದು ಕಂಡುಬಂದಿದೆ. ಹೀಗಿದ್ದರೂ ಸ್ಟಾರ್ಟಪ್‌ಗಳಲ್ಲಿ ಮಹಿಳೆಯರ ಬಗ್ಗೆ ಉತ್ತಮ ಅಭಿಪ್ರಾಯವಿದೆ. ಶೇ. 24ರಷ್ಟು ಸ್ಟಾರ್ಟಪ್‌ಗಳು ಮಹಿಳೆಯರಿಗೆ ಆಡಳಿತ ಮಂಡಳಿಯಲ್ಲಿ ಸ್ಥಾನ ನೀಡುವ ಬಗ್ಗೆ ಉತ್ಸಾಹ ತೋರಿಸಿದ್ದಾರೆ. ಶೇ.18ರಷ್ಟು ಉದ್ಯಮಿಗಳು ಮಹಿಳೆಯರಿಗೆ ಎಕ್ಸಿಕ್ಯುಟಿವ್ ಸ್ಥಾನ ನೀಡುವ ಬಗೆಗೆ ಚಿಂತನೆ ನಡೆಸಿದ್ದರೆ, ಶೇ.33ರಷ್ಟು ಸಂಸ್ಥೆಗಳು ಕಂಪನಿಯ ಉನ್ನತ ಹುದ್ದೆಗಳಿಗೆ ಮಹಿಳೆಯರನ್ನು ಆಯ್ದುಕೊಳ್ಳಲು ಮುಂದಾಗಿವೆ. ಹೀಗಾಗಿ ಸ್ಟಾರ್ಟಪ್ ಕ್ಷೇತ್ರದಲ್ಲಿ ಮಹಿಳಾ ಅಭಿವೃದ್ಧಿಗೆ ಪೂರಕವಾದ ವಾತಾವರಣವಿದೆ.




**ಹೂಡಿಕೆ ಮಾಡಲಿದೆ ಇಫ್ಕೋ:** ರಸಗೊಬ್ಬರ ಉತ್ಪಾದಕ ಸಂಸ್ಥೆಗಳಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಿರುವ ಇಫ್ಕೋ(ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ಸ್ ಕೋ ಆಪರೇಟಿವ್ ಲಿಮಿಟೆಡ್) ಸ್ಟಾರ್ಟಪ್‌ಗಳಲ್ಲಿ ಹೂಡಿಕೆ ಮಾಡಲು ಚಿಂತನೆ ನಡೆಸಿದೆ. ಇದಕ್ಕೆ ಪೂರಕವಾಗಿ 10 ಕೋಟಿ ರೂಪಾಯಿಗಳ ಸ್ಟಾರ್ಟಪ್ ಫಂಡ್ ಅನ್ನು ಕೂಡಾ ರೂಪಿಸಿದೆ. ಇದರ ಮೂಲಕ ಹೊಸ ಐಡಿಯಾಗಳಿಗೆ ಸಹಾಯ ಮಾಡುವುದು ಇಫ್ಕೋ ಉದ್ದೇಶವಾಗಿದೆ. ಅದರಲ್ಲೂ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಯೋಜನೆಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದೆಂದು ಇಫ್ಕೋ ತಿಳಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಇಫ್ಕೋದ ಕಾರ್ಯನಿರ್ವಾಹಕ ನಿರ್ದೇಶಕ ಯು.ಎಸ್. ಅವಾಸ್ತಿ, ಕೃಷಿ ಸಂಬಂಧಿತ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದಾದರೂ ಇತರ ಕ್ಷೇತ್ರಗಳಿಗೂ ಪ್ರೋತ್ಸಾಹ ನೀಡಲಾಗುವುದು. ಅಷ್ಟೇ ಅಲ್ಲ ಅವಶ್ಯಕತೆಯಿದ್ದಲ್ಲಿ ಫಂಡ್‌ನ ಪ್ರಮಾಣವನ್ನು ಹೆಚ್ಚಿಸಲಾಗುವುದು ಎಂದಿದ್ದಾರೆ.